Spl.Case 54/2019
PW-3

**ದಿನಾಂಕಃ 24.05.2023**
**ಸ್ಪೆಷಲ್ ಕೇಸ್ ನಂ. 54/2019**
**ಪ್ರಾಸಾಃ 3**

**(ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)**

**ಪಾಟೀಸವಾಲು ಆರೋಪಿ ಪರ ಶ್ರೀ ಎ.ಜಿ.ಜಿ., ವಕೀಲರಿಂದಃ-**

ನಾನು ಎಸ್.ಎಸ್.ಎಲ್.ಸಿ., ವರೆಗೆ ಓದಿದ್ದೇನೆ. ನನ್ನ ಊರು ಅಬ್ಬೂರುಕಟ್ಟೆ ನನ್ನ ತಂದಯ ಹೆಸರು ಚನ್ನರಾಜು. ನನಗೆ ಯಾವುದೇ ವಾಹನ ಇಲ್ಲ. ಅಬ್ಬೂರುಕಟ್ಟೆಯಿಂದ ಕಾನ್ವೆಂಟ್ ಬಾಣೆಗೆ 10 ಕಿ.ಮೀ. ದೂರ ಇದೆ. ಪ್ರಾಸಾ-1 ಐದಾರು ವರ್ಷಗಳಿಂದ ನನ್ನ ಸ್ನೇಹಿತ. ನಾನು ಮೊದಲು ಗಾರೆ ಕೆಲಸ ಮಾಡುತ್ತಿದ್ದು, ಈಗ ಡ್ರೈವರ್ ಕೆಲಸ ಮಾಡುತ್ತಿದ್ದೇನೆ. ಈ ಘಟನೆ ಆಗಿದೆ ಎಂದು ಹೇಳಲಾದ ಸಂದರ್ಭದಲ್ಲಿ ನಾನು ಕಾನ್ವೆಂಟ್ ಬಾಣೆಯಲ್ಲಿ ಚಂದ್ರಶೇಖರ್ ಎಂಬುವವರ ಮನೆಯಲ್ಲಿ ತಡೆಗೋಡೆ ಕೆಲಸ ಮಾಡುತ್ತಿದ್ದೆ. ಚಂದ್ರಶೇಖರ್ ಕುಶಾಲನಗರದವರು. ಮುನೇಶ್ವರ ದೇವಸ್ಥಾನದ ಬಳಿ ತಡೆಗೋಡೆ ಕಟ್ಟುತ್ತಿದ್ದೆವು, ಆದರೆ ಅದರ ಉದ್ದ ಹಾಗೂ ಅಗಲ ಗೊತ್ತಿಲ್ಲ. ನಾನು ಪೊಲೀಸರಿಗೆ ಈ ಪ್ರಕರಣದ ಬಗ್ಗೆ ಹೇಳಿಕೆ ನೀಡಿದ್ದೇನೆ. ನಾನು ತಡೆಗೋಡೆಗೆ ನೀರು ಹಾಕಲು ಹೋಗುತ್ತಿದ್ದ ವಿಷಯವನ್ನು ಪೊಲೀಸರಿಗೆ ನೀಡಿದ ಹೇಳಿಕೆಯಲ್ಲಿ ಹೇಳಿದ್ದೇನೆ. ನಾನು ಬೆಳಗ್ಗೆ 8.00 ಗಂಟೆಯಿಂದ ಸಂಜೆ 5.00 ಗಂಟೆವರೆಗೆ ಕೆಲಸ ಮಾಡುತ್ತೇನೆ. ನನಗೆ ಆ ದಿನ ಸಂಬಳ ಬರಬೇಕಾದ ಕಾರಣ ಚಂದ್ರಶೇಖರ್ ರವರನ್ನು ಕಾಯುತ್ತಿದ್ದೆ ಎಂದು ಸಾಕ್ಷಿ ನುಡಿಯುತ್ತಾರೆ. ಚಂದ್ರಶೇಖರ್ ಆ ದಿನ ಅಲ್ಲಿಗೆ ಬಂದಿರಲಿಲ್ಲ.

**ನ್ಯಾಯಾಲಯದ ಅವಧಿ ಮುಗಿದ ಕಾರಣ ಪಾಟೀ ಸವಾಲನ್ನು ಮುಂದೂಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

Sd/-xxx
1 ನೇ ಹೆಚ್ಚುವರಿ ಜಿಲ್ಲಾಮತ್ತು ಸತ್ರ ನ್ಯಾಯಾಧೀಶರು,
ಕೊಡಗು, ಮಡಿಕೇರಿ.

**(ಸಾಕ್ಷಿಯನ್ನು ದಿನಾಂಕ 22-01-2024 ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)**

**<u>ಮುಂದುವರೆದ ಪಾಟೀಸವಾಲು ಆರೋಪಿ ಪರ ಶ್ರೀ ಎ.ಜಿ.ಜಿ., ವಕೀಲರಿಂದಃ-</u>**

ಆ ದಿನ ನನ್ನ ಕೆಲಸ 5.30 ರಿಂದ 6.00 ಗಂಟೆಯವರೆಗೆ ಮುಗಿದಿರಬಹುದು. ಆ ದಿನ ಚಂದ್ರಶೇಖರ್ ಅಲ್ಲಿಗೆ ಬಂದಿರಲಿಲ್ಲ ನಾನು ಆ ದಿನ ಸಂಬಳ ತೆಗೆದುಕೊಂಡಿರಲಿಲ್ಲ. ಸದರಿ ದಿನಾಂಕದ ಎರಡು-ಮೂರು ದಿನಗಳ ನಂತರ ನನಗೆ ಸಂಬಳ ಸಿಕಿತ್ತು. ನಾನು ನನ್ನ ನಂಬರ್ ನಿಂದ ಚಂದ್ರಶೇಖರ್ ರವರಿಗೆ ಫೋನ್ ಮಾಡಿದ್ದೆ. ನನ್ನ ಮೊಬೈಲ್ ನಂಬರ್ 9880192470. ಚಂದ್ರಶೇಖರ್ ರವರ ಫೋನ್ ನಂಬರ್ ಎಷ್ಟು ಎಂದು ಹೇಳಲು ಆಗುವುದಿಲ್ಲ ಆದರೆ ಅದು ನನ್ನ ಮೊಬೈಲ್ ನಲ್ಲಿ ಸೇವ್ ಆಗಿದೆ. ಆ ದಿನ ಸಂಜೆ 5.15 - 5.30 ಗಂಟೆಗೆ ನಾನು ಚಂದ್ರಶೇಖರ್ ರವರಿಗೆ ಫೋನ್ ಮಾಡಿದ್ದೆ. ಚಂದ್ರಶೇಖರ್ ರವರಿಗೆ ನಾನು ಫೋನ್ ಮಾಡಿದ್ದೇನೆ ಎಂದು ನಾನು ಪೊಲೀಸರಿಗೆ ಹೇಳಿಲ್ಲ. ಚಂದ್ರಶೇಖರ್ ರವರು ನನ್ನನ್ನು ಅಲ್ಲಿಗೆ ಕಾಯಲು ಹೇಳಿದ್ದರು ಆದರೆ ಎಷ್ಟು ಗಂಟೆಗೆ ಬರುತ್ತೇನೆ ಎಂದು ಹೇಳಿರಲಿಲ್ಲ ನಾನು ಭೋವಿ ಜನಾಂಗದವ. ನಾನು ಹಾಗೂ ಸುಜೀತ್ ರವರು ಸ್ನೇಹಿತರು ಎಂದರೆ ಸರಿಯಲ್ಲ, ಸಾಕ್ಷಿ ಮುಂದುವರೆದು ನನಗೆ ಪರಿಚಯ ಮಾತ್ರ ಇತ್ತು ಎಂದು ನುಡಿಯುತ್ತಾರೆ. ಪ್ರಾಸಾ-1 ಭೋವಿ ಜನಾಂಗದ ಅಧ್ಯಕ್ಷರಾಗಿದ್ದಾರೆ ಎಂದರೆ ಸರಿ. ನಾನಾಗಲೀ ನನ್ನ ಮನೆಯವರಾಗಲೀ ಸದರಿ ಜನಾಂಗದ ಸದ್ಯಸರಲ್ಲ. ಸಾಕ್ಷಿ ಮುಂದುವರೆದು ನಮ್ಮ ಕುಟುಂಬದವರು ಸದರಿ ಜನಾಂಗದ ಸದಸ್ಯರೋ ಎಂಬ ವಿಷಯನನಗೆ ಗೊತ್ತಿಲ್ಲ, ಪ್ರಾಸಾ-1 ರಾಜಕೀಯದಲ್ಲಿ ಇದ್ದಾರೆ ಎಂದರೆ ಸರಿ. ಪ್ರಾಸಾ-1 ಪಂಚಯ್ತಿ ಚುನಾವಣೆಗೆ ನಿಲ್ಲುತಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ಮನೆಯಿಂದ ಪ್ರಾಸಾ-1 ರವರ ಮನೆಗೆ 8 1/2 ರಿಂದ 9 ಕಿ.ಮೀ. ದೂರ ಆಗಬಹುದು. ಅದೇ ರೀತಿ ಕಾನ್ವೆಂಟ್ ಬಾಣೆಯಿಂದ ನಮ್ಮ ಮನೆಗೆ 8 1/2 ರಿಂದ 9 ಕಿ.ಮೀ. ದೂರ ಆಗಬಹುದು. ಕಾನ್ವೆಂಟಕ್ ಬಾಣೆಯಿಂದ ಸೋಮವಾರಪೇಟೆಗೆ 1 ಕಿ.ಮೀ. ದೂರ ಇದೆ.ಕೆಲಸಕ್ಕೆ ಹೋದ ಸ್ಥಳದಿಂದ ಹಿಂತಿರುಗಿ ಹೋಗಲು ಬಸ್ಸು ವ್ಯವಸ್ಥೆ ಇಲ್ಲ ಆ ಬಳಿಕ ನನ್ನ ಕೆಲಸದ ಸ್ಥಳದಿಂದ 1 ಕಿ.ಮೀ ನಡೆದು ನಾನು ಬಸ್‌ನ್ನು ಹಿಡಿಯುತ್ತೇನೆ ಎಂದು ನುಡಿಯುತ್ತಾರೆ. ಸೋಮವಾರಪೇಟೆಯಿಂದ ಅಬ್ಬೂರುಕಟ್ಟೆಗೆ ಕೊನೆಯ ಬಸ್ಸು ಒಂದು 7.00 ಗಂಟೆಗೆ ಇದೆ ಇನ್ನೊಂದು 9.00 ಗಂಟೆಗೆ ಇದೆ. ನಾನು ಫೋನ್ ಮಾಡಿದಾಗ ಚಂದ್ರಶೇಖರ್ ರವರು ಕೂಡಿಗೆಯಲ್ಲಿ ಇದ್ದರು. ಚಂದ್ರಶೇಖರ್ ರವರನ್ನು ಸಂಪರ್ಕಿಸಲು ಹತ್ತಿರ ಸ್ಥಳ ಸೋಮವಾರಾಪೇಟೆ ಎಂದರೆ ಕೆಲಸ ಕಾನ್ವೆಂಬರ್ ಬಾಣೆಯಲ್ಲಿ ಆಗುತಿದ್ದ ಕಾರಣ ನಾನು ಅವರನ್ನು ಅಲ್ಲಿಯೇ ಸಂಪರ್ಕಿಸಿದ್ದೆ ಎಂದು ನುಡಿಯುತ್ತಾರೆ. 7.30 ಗಂಟೆಯ ವರೆಗೆ ಚಂದ್ರಶೇಖರ್ ರವರನ್ನು ನಾನು ಎರಡು ಬಾರಿ ಫೋನಿನಲ್ಲಿ ಸಂಪರ್ಕಿಸಿದ್ದೆ ಆದರೆ ಅವರು ಬಂದಿರಲಿಲ್ಲ. ಆ ದಿನ ನನಗೆ ಪ್ರಾಸಾ-1 ಫೋನ್ ಮಾಡಿರಲಿಲ್ಲ. ಅದೇ ರೀತಿ ಚಾಸಾ-2 ಸಹ ನನಗೆ ಫೋನ್ ಮಾಡಿರಲಿಲ್ಲ. ನಾನು ಚಾಸಾ-2 ರವರಿಗೆ ಆ ದಿನ ಫೋನ್ ಮಾಡಿಲ್ಲ. ನನ್ನ ಮನೆಯಿಂದ ಆರೋಪಿಯ ಮನೆಗೆ 9 ಕಿ.ಮೀ.

ದೂರ. ಆರೋಪಿಯನ್ನು ನಾನು ಮೊಟ್ಟಮೊದಲ ಬಾರಿಗೆ ಸೋಮವಾರಪೇಟೆಯಲ್ಲಿ ನೋಡಿದ್ದೆ. ಆರೋಪಿಯನ್ನು ನನಗೆ ವೈಯಕ್ತಿಕವಾಗಿ ಪರಿಚಯ ಇರಲಿಲ್ಲ. ಕಾರಿನಲ್ಲಿ ಓಡಾಡುವಾಗ ನೋಡಿ ಮಾತ್ರ ಆರೋಪಿಯನ್ನು ಪರಿಚಯ ಇತ್ತು. ಘಟನೆ ಆಯಿತು ಎಂದು ಹೇಳಲಾಗುವ ಸ್ಥಳದಲ್ಲಿ ಆರೋಪಿಯ ಕಾರು ಇತ್ತು ಅವರ ಜೊತೆ ಪ್ರಾಸಾ-1 ರವರ ಬುಲೆಟ್ ಇತ್ತು. ಪ್ರಾಸಾ-1, ಆರೋಪಿ ಹಾಗೂ ಕೆಲವು ಅಂಗಡಿಯಜನವರನ್ನು ಬಿಟ್ಟರೆ ಬೇರೆ ಯಾರು ಅಲ್ಲಿ ಇದ್ದಿರಲಿಲ್ಲ. ಸದರಿ ಅಂಗಡಿಯ ಸುತ್ತಾಮುತ್ತ ಹಲವಾರು ಮನೆಗಳು ಇವೆ ಅವರು ಯಾರು ಘಟನಾ ಸ್ಥಳಕ್ಕೆ ಬಂದಿರಲಿಲ್ಲ. ನಾನು ಅಂಗಡಿಗೆ ಹೋದ ಬಳಿಕ ಪ್ರಾಸಾ-1 ರವರು ಆರೋಪಿಗೆ ಫೋನ್ ಮಾಡಿದ್ದಾರೋ ಅಥವಾ ಅದಕ್ಕಿಂತ ಮೊದಲೇ ಫೋನ್ ಮಾಡಿದ್ದಾರೋ ಎಂದರೆ ಸಾಕ್ಷಿ ನಾನು ತಡೆಗೋಡೆಗೆ ನೀರು ಹಾಯಿಸುತಿದ್ದಾಗ ಪ್ರಾಸಾ-1 ಆರೋಪಿಗೆ ಫೋನ್ ಮಾಡಿದ್ದರು ಎಂದು ನುಡಿಯುತ್ತಾರೆ. ಚಂದ್ರನವರ ಅಂಗಡಿಯಿಂದ ತಡೆಗೋಡೆ ಇರುವ ಸ್ಥಳಕ್ಕೆ 50-100 ಮೀಟರ್ ಅಂತರ ಇದೆ. ಚಂದ್ರನವರ ಅಂಗಡಿಯಿಂದ ಮಾತನಾಡಿದರೆ ತಡೆಗೋಡೆ ಇರುವ ಸ್ಥಳಕ್ಕೆ ಕೇಳುವುದಿಲ್ಲ ಎಂದರೆ ಸಾಕ್ಷಿ ಜೋರಾಗಿ ಮಾತನಾಡಿದರೆ ಎಲ್ಲರಿಗೂ ಕೇಳಿಸುತ್ತದೆ ಎಂದು ನುಡಿಯುತ್ತಾರೆ. ಪ್ರಾಸಾ-1 ಆ ದಿನ ಆರೋಪಿಗೆ ಯಾವ ರೀತಿಯಲ್ಲಿ ಮಾತನಾಡುತಿದ್ದರು ಎಂದರೆ ಸಾಕ್ಷಿ ಅವರು ಮಾತನಾಡುತ್ತಿರುವುದು ನನಗೆ ಸ್ಪಷ್ಟವಾಗುತ್ತಿರಲಿಲ್ಲ ಎಂದು ನುಡಿಯುತ್ತಾರೆ. ಪ್ರಾಸಾ-1 ಫೋನ್ ಮಾಡಿದ ಸಂದರ್ಭದಲ್ಲಿ ಆರೋಪಿ ಬಂದ ಕಾರಣ ನಾನು ಪ್ರಾಸಾ-1 ಆರೋಪಿಗೆ ಫೋನ್ ಮಾಡಿದರು ಎಂದು ಹೇಳುತಿದ್ದೇನೆ. ವೈಯಕ್ತಿಕವಾಗಿ ಪ್ರಾಸಾ-1 ಆ ದಿನ ಯಾರಿಗೆ ಫೋನ್ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ಆರೋಪಿಯೇ ಅಲ್ಲಿಗೆ ಬಂದ ಕಾರಣ ನಾನು ಪ್ರಾಸಾ-1 ಆರೋಪಿಗೆ ಫೋನ್ ಮಾಡಿದ್ದರು ಎಂದು ಹೇಳಿದ್ದೇನೆ ಎಂದರೆ ಸರಿ.

ಪ್ರಾಸಾ-1 ಅಲ್ಲಿಗೆ ಬಂದ ನಂತರ ರಾಜಣ್ಣನವರ ಅಂಗಡಿಯ ಎದುರು ಆರೋಪಿಯ ಜೊತೆ ಮಾತನಾಡಿದರು. ಅವರು ಅಂಗಡಿಯ ಹಿಂಭಾಗಕ್ಕೆ ಹೋದ ವಿಚಾರಣ ನನಗೆ ಗೊತ್ತಿಲ್ಲ. ಅಂಗಡಿಯ ಮುಂದೆ ಒಂದು ಕರೆಂಟ್ ಕಂಬ ಇದೆ ಎಂದರೆ ಸರಿ ಮತ್ತು ಅಲ್ಲಿ ಬೀದಿ ದೀಪ ಇದೆ. ಪ್ರಾಸಾ-1 ಆರೋಪಿಯ ಜೊತೆ ಮಾತನಾಡುತಿದ್ದಾಗ ನಾನು 20 ರಿಂದ 30 ಅಡಿ ದೂರದಲ್ಲಿ ಇದ್ದೆ. ಮಾತನಾಡಿದ ನಂತರ ಆರೋಪಿ ಕಾರಿನ ಬಳಿಗೆ ಹೋದರು, ಪ್ರಾಸಾ-1 ಅಲ್ಲಿಯೇ ಇದ್ದರು. ಪ್ರಾಸಾ-1 ಕಾರಿನ ಬಳಿ ಹೋಗಿರಲಿಲ್ಲ. ರಸ್ತೆಯ ಬಲಭಾಗದಲ್ಲಿ ಕಾರು ಇತ್ತು, ಎಡ ಭಾಗದಲ್ಲಿ ನಾನು ಇದ್ದೆ. ಲೈಟ್ ಕಂಬದ ಎಡಭಾಗದಲ್ಲಿ ನಾನು ಇದ್ದೆ. ಕಾರಿನಿಂದ 10 ಅಡಿ ದೂರದಲ್ಲಿ ಆರೋಪಿ ಪ್ರಾಸಾ-1 ರವರಿಗೆ ಗುಂಡು ಹೊಡೆದಿದ್ದರು. ಪ್ರಾಸಾ-1 ರವರ ಬಳಿ ಮಾತನಾಡಲು ಮೊದಲು ಆರೋಪಿ ಬಂದಿದ್ದಾಗ ಆರೋಪಿಯ ಕೈಯಲ್ಲಿ ಕೋವಿ ಇದ್ದಿರಲಿಲ್ಲ. ಕೋವಿ ಕಾರಿನ ಯಾವ ಭಾಗದಲ್ಲಿ ಇತ್ತು ಎಂದು ನಾನು ನೋಡಿಲ್ಲ. ಆರೋಪಿ ಪ್ರಾಸಾ-1 ರವರಿಗೆ ಗುಂಡು ಹಾರಿಸಿದ್ದರು ಎಂದು ಹೇಳುವ ಸಂದರ್ಭದಲ್ಲಿ ನಾನು 10 ರಿಂದ 15 ಅಡಿ ದೂರದಲ್ಲಿ ಇದ್ದೆ. ಆಗ 7.30 ರಿಂದ 7.45 ಗಂಟೆ ಆಗಿರಬಹುದು. ನಾನು ಆ ಸಂದರ್ಭದಲ್ಲಿ ಘಟನೆ ವಿಚಾರವಾಗಿ

ಯಾರಿಗೂ ಫೋನ್ ಮಾಡಿರಲಿಲ್ಲ. ನಮ್ಮ ಮನೆಯಿಂದ ಎರಪಾರೆಗೆ 4 ಕಿ.ಮೀ. ಪ್ರಾಸಾ-1 ಮೊದಲು ಅಲ್ಲಿ ವಾಸವಿದ್ದರು. ಪ್ರಾಸಾ-1 ಎರಪಾರೆಯಲ್ಲಿ ಇರುವ ಸಂದರ್ಭದಲ್ಲಿ ನನಗೆ ಅವರ ಪರಿಚಯ ಇತ್ತು. ಪ್ರಾಸಾ-1 ರವರ ತಂದೆ ಕಲ್ಲು ಹೊಡೆಯುತ್ತಾರೆ. ನಾನು ಆರೋಪಿಗೆ ಫೋನ್ ಮಾಡಿಲ್ಲ, ಆರೋಪಿ ಸಹ ನನಗೆ ಫೋನ್ ಮಾಡಿಲ್ಲ. ಗುಂಡೇಟು ಆಗಿದೆ ಎಂದು ಹೇಳುವ ಸ್ಥಳದಿಂದ ಕೋವಿಯನ್ನು ಯಾರು ತೆಗೆದುಕೊಂಡು ಹೋಗಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಾನು ಹಾಗೂ ಪ್ರಾಸಾ-1 ತುಂಬ ವರ್ಷಗಳಿಂದ ಆತ್ಮೀಯ ಸ್ನೇಹಿತರು ಎಂದರೆ ಸರಿಯಲ್ಲ.

ಆರೋಪಿ ಗ್ರಾಮಪಂಚಾಯ್ತಿ ಅಧ್ಯಕ್ಷರು ಆಗಿದ್ದರರು ಎಂದರೆ ನನಗೆ ಗೊತಿಲ್ಲ. ಪ್ರಾಸಾ-1 ಹಾಗೂ ಆರೋಪಿಗೂ ರಾಜಕೀಯ ವೈಮನಸ್ಸು ಇತ್ತು ಎಂದರೆ ಸರಿಯಲ್ಲ. ನಾನು, ನನ್ನ ಸ್ನೇಹಿತರು ಹಾಗೂ ಪ್ರಾಸಾ-1 ಸೇರಿಕೊಂಡು ಆರೋಪಿಗೆ ಹಲ್ಲೆ ಮಾಡುವ ಒಂದು ಪ್ಲಾನ್ ಮಾಡಿದ್ದೆವು ಎಂದರೆ ಸರಿಯಲ್ಲ. ಆರೋಪಿ ಕಾರಿನ ಮುಖಾಂತರ ಹಿಂತಿರುಗುವ ಸಂದರ್ಭದಲ್ಲಿ ನಾನು, ನನ್ನ ಸ್ನೇಹಿತರು ಹಾಗೂ ಪ್ರಾಸಾ-1 ಸೇರಿಕೊಂಡು ಕಾರಿನ ಒಳಗಿದ್ದ ಕೋವಿಯನ್ನು ಕಿತ್ತುಕೊಳ್ಳುವ ಪ್ರಯತ್ನ ಮಾಡಿದ್ದೆವು ಎಂದರೆ ಸರಿಯಲ್ಲ. ಪ್ರಾಸಾ-1 ಕೋವಿಯನ್ನು ಕಿತ್ತುಕೊಳ್ಳುವ ಸಂದರ್ಭದಲ್ಲಿ ಅವರಿಗೆ ಅದರಿಂದ ಮಿಸ್ ಫಾಯರ್ ಆಗಿ ಗುಂಡೇಟು ತಗುಲಿತ್ತು ಎಂದರೆ ಸರಿಯಲ್ಲ. ಕೋವಿಯನ್ನು ಕಿತ್ತುಕೊಂಡ ನಂತರ ಆರೋಪಿಗೆ ಹಲ್ಲೆ ಮಾಡಬೇಕು ಎನ್ನುವುದು ನಮ್ಮ ಉದ್ದೇಶ ಎಂದರೆ ಸರಿಯಲ್ಲ. ಗುಂಡೇಟು ಆದ ಬಳಿಕ ನನ್ನ ಸ್ನೇಹಿತರೆ ಕೋವಿಯನ್ನು ಪೊಲೀಸ್ ಠಾಣೆಗೆ ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಆರೋಪಿ ಕೋವಿಯಿಂದ ಪ್ರಾಸಾ-1 ರವರಿಗೆ ಗುಂಡು ಹೊಡೆದಿದ್ದಾರೆ ಎನ್ನುವುದು ಕಟ್ಟುಕತೆ ಎಂದರೆ ಸರಿಯಲ್ಲ. ಆರೋಪಿ ಪ್ರಾಸಾ-1 ರವರಿಗೆ ಸುಮಾರು 2 ರಿಂದ 3 ಅಡಿ ಅಂತರದಲ್ಲಿ ಗುಂಡು ಹೊಡೆದಿರಬಹುದು, ಸಾಕ್ಷಿ ಮುಂದುವರೆದು ನಿರ್ದಿಷ್ಟವಾದ ದೂರವನ್ನು ಹೇಳಲು ನನಗೆ ಸಾಧ್ಯವಿಲ್ಲ ಎಂದು ನುಡಿಯುತ್ತಾರೆ. ಆರೋಪಿ ಪ್ರಾಸಾ-1 ರವರ ಎಡ ಎದೆಯ ಹತ್ತಿರ ಗುಂಡು ಹೋಡೆದಿದ್ದರು, ಆದರೆ ಪ್ರಾಸಾ-1 ತಿರುಗಿದ ಕಾರಣ ಅದು ಎದೆ ಬಲಭಾಗಕ್ಕೆ ತಗುಲಿತ್ತು ಎಂದು ನುಡಿಯುತ್ತಾರೆ. ಆರೋಪಿ ಕೋವಿಯನ್ನು ತೆಗೆದುಕೊಂಡು ಬಂದು ಪ್ರಾಸಾ-1 ರವರಿಗೆ ಹೊಡೆದರು ಆದರೆ ಯಾವ ರೀತಿಯಾಗಿ ಹೊಡೆದರು ಎಂದು ನನಗೆ ಹೇಳಲು ಆಗುವುದಿಲ್ಲ. ಆರೋಪಿ ಪ್ರಾಸಾ-1 ರವರ ಎದೆಯ ಭಾಗಕ್ಕೆ ಗುರಿ ಇಟ್ಟು ಯಾವತ್ತು ಗುಂಡು ಹೊಡೆದಿರುವುದಿಲ್ಲ ಮತ್ತು ಪ್ರಾಸಾ-1 ತಿರುಗಿದ ಕಾರಣ ಅದು ಬಲ ಎದೆಗೆ ತಗುಲಿರಲಿಲ್ಲ ಎಂದರೆ ಸರಿಯಲ್ಲ. ಪ್ರಾಸಾ-1 ತಿರುಗಿದ ಕಾರಣ ಅವರ ಬಲ ಎದೆಗೆ ಗುಂಡಾಗಿತ್ತು ಎನ್ನುವುದನ್ನುನಾನು ಪೊಲೀಸರಿಗೆ ನೀಡಿದ ಹೇಳಿಕೆಯಲ್ಲಿ ಹೇಳಿರಲಿಲ್ಲ. ನಾನು ಪ್ರಾಸಾ-1 ತಿರುಗಿದ್ದಾರೆ ಎಂಬ ವಿಚಾರವನ್ನು ಇದೇ ಮೊದಲ ಬಾರಿಗೆ ಹೇಳಿದ್ದೇನೆ ಎಂದರೆ ಸರಿ. ನಾನು ಪೊಲೀಸರು ಮಾತು ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಪ್ರಾಸಾ-1 ರವರಿಗೆ ಆ ರೀತಿಯಾಗಿ ಬಂದು ಗುಂಡು ಹೊಡೆದಿದ್ದು ಇಲ್ಲ ಎಂದರೆ ಸರಿಯಲ್ಲ. ಪ್ರಾಸಾ-1, ನಾನು ಹಾಗೂ ನನ್ನ ಸ್ನೇಹಿತರು ಸೇರಿಕೊಂಡು ಆರೋಪಿಯ ಕಾರಿನಿಂದ ಕೋವಿಯನ್ನು

ಕಿತ್ತುಕೊಳ್ಳುವ ಸಂದರ್ಭದಲ್ಲಿ ಮಿಸ್ ಫಾಯರ್ ಆಗಿ ಪ್ರಾಸಾ-1 ರವರಿಗೆ ತಗುಲಿತ್ತು ಎಂದರೆ ಸರಿಯಲ್ಲ. ಆರೋಪಿ ಈ ಘಟನೆಗೆ ಸಂಬಂಧಿಸಿದಂತೆ ಕೋವಿಯನ್ನು ಉಪಯೋಗಿಸಿಲ್ಲ ಎಂದರೆ ಸರಿಯಲ್ಲ.

**<u>ಮರುವಿಚಾರಣೆಃ</u> ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

Sd/-xxx
1 ನೇ ಹೆಚ್ಚುವರಿ ಜಿಲ್ಲಾಮತ್ತು ಸತ್ರ ನ್ಯಾಯಾಧೀಶರು,
ಕೊಡಗು, ಮಡಿಕೇರಿ.